# IN THE COURT OF THE ADDL. SENIOR CIVIL JUDGE & JMFC., GUBBI
# OS – **210/2023**

Witness present and duly sworn on : 29-03-2025

Cross Examination: by Counsel for Defendants :

ನಾನು 7 ನೇ ತರಗತಿಯವರೆಗೆ ಓದಿದ್ದೇನೆ . ಈ ದಾವೆಯ 1 ನೇ ವಾದಿ ಭದ್ರಯ್ಯ ನನ್ನ ಸಂಬಂಧಿಕರಲ್ಲ . ನಾನು ಸುಮಾರು 50 ವರುಷಗಳಿಂದ ಹೇರೂರು ಪಾರ್ಂ ನಲ್ಲಿ ವಾಸ ಇದ್ದೇನೆ . ನನಗೆ ಈಗ 75 ವರುಷ ವಯಸ್ಸು. ನಾನು ಹೊಲ ಮನೆ ಮತ್ತು ಕೂಲಿ ಕೆಲಸ ಮಾಡುತ್ತೇನೆ. ನಾನು ಹೇರೂರು ಫಾರ್ಂ ನಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ನಾನು ಜಿ ಹರಿವೇಸಂದ್ರದಲ್ಲಿ ವಾಸ ಇದ್ದೇನೆ ಎಂದರೆ ಸುಮಾರು 4-5 ವರುಷಗಳಿಂದ ಹರಿವೇಸಂದ್ರದಲ್ಲಿ ವಾಸ ಇದ್ದೇನೆ . ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿದ್ದೇನೆ . ವಕೀಲರು ಬರೆದ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಹೇರೂರು ಪಾರ್ಂ ನಲ್ಲಿ ಇದೆ . ಸದರಿ ಆಸ್ತಿಯು ಗ್ರಾಮಾಠಾಣಾ ಅಥವಾ ಸರ್ವೆ ನಂಬರ್ ವ್ಯಾಪ್ತಿಗೆ ಬರುತ್ತದಯೇ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಆಗಿರುವುದಿಲ್ಲ. ದಾವಾ ಸ್ವತ್ತು ಖರೀದಿಮಾಡಿರುವ ಆಸ್ತಿ . ಸಾಕ್ಷಿ ಮುಂದುವರೆದು ಸುಮಾರು 50 ವರುಷಗಳಿಂದ ಭದ್ರಯ್ಯನವರು ದಾವಾ ಆಸ್ತಿಯಲ್ಲಿ , ಅವರು ಖರೀದಿ ಮಾಡಿದ್ದಾರೋ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ . ಸಾಕ್ಷಿ ಪುನಃ ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ . ಸದರಿ ಆಸ್ತಿಯ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ . ದಾವಾ ಆಸ್ತಿಯ ಸರ್ವೆ ನಂ 43/2 . ಅದರ ವಿಸ್ತೀರ್ಣ 2 ಗುಂಟೆ . ಅದರ ಖಾತಾ ನಂಬರ್ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ . ದಾವಾ ಆಸ್ತಿಯ ಸ ನಂ 43/2 ಎ 1 ಎಂದರೆ ಸ ನಂ 43/2 ಆಗಿರುತ್ತದೆ. ನಾನು ದಾವಾ ಆಸ್ತಿಯ ಖಾತೆ ನಂಬರ್ ಮಾಹಿತಿಯನ್ನು ಸುಳ್ಳು ಹೇಳಿದೇನೆ ಎಂದರೆ ಸರಿಯಲ್ಲ. 2 ಗುಂಟೆ ಖಾತೆ ಆಗಿರುವ ವಿಚಾರ ನನಗೆ ಗೊತ್ತಿದೆ . 1975 ರಲ್ಲಿ ಸದರಿ ಖಾತೆ ಆಗಿರುತ್ತದೆ . 2 ಗುಂಟೆ ವಿಸ್ತೀರ್ಣದಲ್ಲಿ ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ

ದಕ್ಷಿಣ 61 ಅಡಿಯಲ್ಲಿ ಮನೆ ಇದೆ . ಸದರಿ ವಿಸ್ತೀರ್ಣದ ಒಟ್ಟು ಚದುರ ಅಡಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಚಂದ್ರಪ್ಪ , ಪಶ್ಚಿಮಕ್ಕೆ ಗೌರಮ್ಮ , ಉತ್ತರಕ್ಕೆ ಬಿ ಹೆಚ್ ರಸ್ತೆ ಮತ್ತು ದಕ್ಷಿಣಕ್ಕೆ ಮಂಗಳಮ್ಮ . ಸದರಿ ಮಂಗಳಮ್ಮ ಜಮೀನಿನ ಮಾಲೀಕರು .

ಜಿ ಯು ಮೊಹಮ್ಮದ್ ಹಯಾತ್ ಸಾಬ್ ರವರ 2 ಗುಂಟೆ ಜಮೀನಿಗೆ ಮತ್ತು ದಾವಾ ಆಸ್ತಿಯ ಚೆಕ್ಕುಬಂದಿಗೆ ತಾಳೆ ಬರುವುದಿಲ್ಲ ಎಂದರೆ ಸರಿಯಲ್ಲ. ನೊಂದಣಿ ಸಂಖ್ಯೆ 7421/1976-77 ರ ಕ್ರಯಪತ್ರದಲ್ಲಿ ಹಯಾತ್ ಸಾಬ್ ರವರು ದಕ್ಷಿಣದಲ್ಲಿ ಉಳಿಮೆ ಮಾಡುತ್ತಿದ್ದರು ಆದ ಕಾರಣ ದಕ್ಷಿಣಕ್ಕೆ ಹಯಾತ್ ಸಾಬ್ ಎಂದು ಹೇಳಿದ್ದೇನೆ ಎಂದರೆ ಸರಿ . ಅವರು ಈಗ ದಕ್ಷಿಣಕ್ಕೆ ಅನುಭವದಲ್ಲಿ ಇರುವುದಿಲ್ಲ. ಹಯಾತ್ ಸಾಬ್ ರವರ ಜಮೀನು ಮಾಲೀಕತ್ವದಲ್ಲಿ ಇಲ್ಲ ಎಂದರೆ ಜಮೀನು ಇದೆ ಆದರೆ ದಕ್ಷಿಣಕ್ಕೆ ಇರುವುದಿಲ್ಲ. ನೊಂದಣಿ ಸಂಖ್ಯೆ 1601/1968-69 ದಾಖಲೆಯಲ್ಲಿ ಹಯತ್ ಸಾಬ್ ರವರು ರೂ 100-00 ಕ್ಕೆ ಖರೀದಿ ಮಾಡಿದ್ದರು ಎಂದರೆ ರೂ 90-00 ಗೆ ಖರೀದಿ ಮಾಡಿದ್ದರು . ಹಯಾತ್ ಸಾಬ್ ರವರು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದೆ . ಮಾರಾಟ ಆಗಿರುವುದನ್ನು ತೋರಿಸಲು ನ್ಯಾಯಾಲಯದಲ್ಲಿ ಋಣಾಭಾರ ದಾಖಲೆಯನ್ನು ಹಾಜರುಪಡಿಸಿದ್ದಾರೆ . ಸದರಿ ದಾಖಲೆಯನ್ನು ಹಾಜರುಪಡಿಸಿದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೊದಲು ಕರಿಹೆಂಚಿನ ಮನೆ ಇದ್ದು ಈಗ ಶೀಟ್ ಮನೆ ಕಟ್ಟಿಸಿದ್ದಾರೆ . ಸುಮಾರು 50 ವರುಷಗಳಿಂದ ಮತ್ತು ಈಗಲೂ ಸಹ ಸದರಿ ಆಸ್ತಿಯಲ್ಲಿ ವಾದಿಗಳು ಇದ್ದಾರೆ . ಆಸ್ತಿಯನ್ನು ಬಾಡಿಗೆಗೆ ವಾದಿಗಳ ಪೂರ್ವಜರು ಪಡೆದಿದ್ದರು ಎಂದರೆ ಬಾಡಿಗೆಗೆ ಇರುವುದಿಲ್ಲ. ಆದರೆ ಪ್ರತಿವಾದಿಗಳು ಬಾಡಿಗೆಗೆ ಇದ್ದಾರೆ ಎಂದು ಮಾತನಾಡುತ್ತಿದ್ದಾರೆ . ಭದ್ರಯ್ಯನವರು ದಾಖಲೆಯನ್ನು ಸರಿ ಮಾಡಿಕೊಳ್ಳಲು ನ್ಯಾಯಾಲಯದಲ್ಲಿ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ.

2 ಗುಂಟೆ ಜಮೀನಿಗೆ ಸರ್ವೆ ನಕ್ಷೆ ಆಗಿರುತ್ತದೆ . ಅಂತಹ ನಕ್ಷೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಹಯಾತ್ ಸಾಬ್ ರವರು ಉಳಿಮೆ ಮಾಡುತ್ತಿದ್ದಾರೆ ಎಂದರೆ ಸರಿ . ನಾನು ಮೇಲೆ ಹೇಳಿದ ಚೆಕ್ಕುಬಂದಿ ಯಲ್ಲಿ ಹಯಾತ್ ಸಾಬ್ ರವರ ಮಾಲೀಕತ್ವದ ಜಮೀನು ಎಂದು ಬರೆಸಿಲ್ಲ ಎಂದರೆ ಸರಿ .

ಸರ್ವೆ ನಂ 66 ರಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ಭದ್ರಯ್ಯನವರು ವಾಸ ಮಾಡುತ್ತಿರುವ ಜಮೀನಿನಲ್ಲಿ 29 x 19 = 551 ಚದರ ಅಡಿ ವಿಸ್ತೀರ್ಣಕ್ಕೆ ತೆರಿಗೆ

ಕಟ್ಟುತ್ತಿದಾರೆ ಎಂದರೆ ಸರಿ . ಮೊದಲು 1 ಖಾತೆ ಇತ್ತು ಈಗ 2 ಖಾತೆ ಆಗಿದೆ ಎಂದರೆ ಸರಿಯಲ್ಲ.

ಹನುಮಕ್ಕನ ತಂದೆ ತಾಯಿ ಚಿಕ್ಕನರಸಯ್ಯ ಮತ್ತು ಭದ್ರಮ್ಮ ನನಗೆ ಗೊತ್ತು . ನಾನು ಸುಳ್ಳು ವಂಶವೃಕ್ಷ ಬರೆಸಿದ್ದೇನೆ ಎಂದರೆ ಸರಿಯಲ್ಲ. ತಾಲ್ಲೂಕು ಕಚೇರಿಯಿಂದ ತಹಶೀಲ್ದಾರ್ ರವರು ನೀಡಿದ ವಂಶವೃಕ್ಷ ಹಾಜರುಪಡಿಸಿದ್ದಾರೆ . ನಾನು 2 ಗುಂಟೆ ಆಸ್ತಿಯನ್ನು ಹಯಾತ್ ಸಾಬ್ ರವರಿಂದ ಖರೀದಿ ಮಾಡಿದ್ದೇನೆ . ನಾನು ಸುಳ್ಳು ಹೇಳುತಿದೇನೆ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಹಾಜರುಪಡಿಸಿದ್ದಾರೆ . ಕ್ರಯಪತ್ರವನ್ನು ಹಾಜರುಪಡಿಸಿಲ್ಲ ಮತ್ತು ನನಗೆ ಸದರಿ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕನರಸಯ್ಯ ಭದ್ರಯನವರ ತಾತ . ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಹಮ್ಮದ್ ಹಯಾತ್ ಸಾಬ್ ಜೀವಂತ ಇದ್ದಾರೆ . ಸರ್ವೆ ನಂ 66 ಜಮೀನು ಮಲ್ಲಿಕ್ ಅಹಮದ್ ರವರ ಹೆಸರಿನಲ್ಲಿ ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಹಯಾತ್ ಸಾಬ್ ಮತ್ತು ಮಲ್ಲಿಕ್ ಅಹಮದ್ ತಂದೆ ಮಗ . ಸದರಿ ಚಿಕ್ಕನರಸಯ್ಯ ನವರು ಮೂಲತಃ ನಾಗಸಂದ್ರದ ನಿವಾಸಿ ಎಂದರೆ ಸರಿಯಲ್ಲ. ಅವರು ಹೇರೂರು ಪಾರಂ ನಿವಾಸಿ . ಸದರಿ ಚಿಕ್ಕನರಸಯ್ಯನವರು ದಾವಾ ಆಸ್ತಿಯ ಪಶ್ಚಿಮಕ್ಕೆ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ಗೊತ್ತಿಲ್ಲದೇ ಇದ್ದರಾ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(Typed to my dictation in open court)

**Re-examination nil**

R.O.I & A.C.

sd/-

Addl. Senior Civil Judge and
JMFC., Gubbi